**O.S** 42/2010

**PW-4**

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ 05.06.2024 ರಂದು ಪ್ರಮಾಣ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ 4 ರಿಂದ 8 ರವರ ಪ್ರತಿವಾದಿಗಳ ಪರ ವಕೀಲರಾದಃ ಶ್ರೀ ಜೆ.ಪಿ. ರವರಿಂದ**

ನನಗೆ ಈಗ 70 ವರ್ಷ ವಯಸ್ಸಾಗಿರುತ್ತದೆ. ನಾನು ಮೂಲತಃ ಆಲ್ದೂರಿನ ಗ್ರಾಮದವನು. ನನ್ನ ಮನೆ ಆಲ್ದೂರಿನ ಚೌಡಿಯ ಹತ್ತಿರ ಇದೆ. ವಾದಿಯ ಮನೆ ನನ್ನ ಮನೆ ಇರುವ ಬೀದಿಯ ಪಕ್ಕದ ಬೀದಿಯಲ್ಲಿರುತ್ತದೆ. ಪ್ರಭುಸ್ವಾಮಿಯವರ ಜಮೀನಿನ ಮೇಲೆ ಈ ದಾವೆಯನ್ನು ಹೂಡಿರುತ್ತಾರೆ. ಯಾವ ವಿಷಯಕ್ಕೆ ಸಂಬಂಧಿಸಿದಂತೆ ಈ ದಾವೆಯನ್ನು ಪ್ರಭುಸ್ವಾಮಿಯವರು ಹೂಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಈ ಹಿಂದೆ ನಮ್ಮ ಆಲ್ದೂರಿನ ಗ್ರಾಮದಲ್ಲಿ ಬಸಪ್ಪ ಎಂಬ ಹೆಸರಿನ ಸುಮಾರು ವ್ಯಕ್ತಿಗಳು ಇದ್ದರು ಎಂದರೆ ನಿಜ. ಪೊಲೀಸ್ ಬಸಪ್ಪ ಎಂದು ಕರೆಯಲ್ಪಡುವವರು ಪೊಲೀಸ್ ಕೆಲಸ ಮಾಡುತ್ತಿದ್ದರು ಎಂದರೆ ನಿಜ. ಬಸಪ್ಪರವರು ಪೋಲೀಸ್ ಕೆಲಸ ಮಾಡುತ್ತಿದ್ದ ಕಾರಣ ಅವರಿಗೆ ಪೊಲೀಸ್ ಬಸಪ್ಪ ಎಂಬ ಹೆಸರು ಬಂದಿರುತ್ತದೆ ಎಂದರೆ ನಿಜ. ಪೊಲೀಸ್ ಬಸಪ್ಪ ರವರು ತಮ್ಮ ಪೊಲೀಸ್ ವೃತ್ತಿಯನ್ನು ಮೈಸೂರಿನಲ್ಲಿ ಮಾಡುತ್ತಿದ್ದರು ಸಾಕ್ಷಿಯು ಮುಂದುವರಿದು ಆಲ್ದೂರಿಗೆ ಹೋಗಿ ಬಂದು ಮಾಡುತ್ತಿದ್ದರು. ಪೊಲೀಸ್ ಬಸಪ್ಪ ರವರಿಗೆ ಆಲ್ದೂರಿನಲ್ಲಿ ಮನೆ ಇತ್ತು. ಪೊಲೀಸ್ ಬಸಪ್ಪ ರವರಿಗೆ ಆಲ್ದೂರಿನ ಶಿವನಪ್ಪನ ಬೀದಿಯಲ್ಲಿ ಮನೆ ಇತ್ತು. ಪೊಲೀಸ್ ಬಸಪ್ಪರವರ ಮನೆಯ ಅಕ್ಕಪಕ್ಕದಲ್ಲಿ ಯಾರ ಮನೆಗಳು ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಪೊಲೀಸ್ ಬಸಪ್ಪ ರವರು ಮೈಸೂರಿನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನಿಜ ಅವರು ಖಾಯಂ ಆಗಿ ಮೈಸೂರಿನ ವಿದ್ಯಾರಣ್ಯಪುರಂ ನಲ್ಲಿ ವಾಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿಯು ಮುಂದುವರಿದು ಆಲ್ದೂರಿಗೆ ಹೋಗಿ ಬಂದು ಮಾಡುತ್ತಿದ್ದರು. ಪೊಲೀಸ್ ಬಸಪ್ಪ ರವರು ಆಲ್ದೂರಿನಲ್ಲಿ ಇರುವ ತಮ್ಮ ಮನೆಗೆ ಬಂದು ಹೋಗುತ್ತಿದ್ದರು ಸದರಿ ಮನೆಯಲ್ಲಿ ಪೊಲೀಸ್ ಬಸಪ್ಪ ರವರ ಹೆಂಡತಿ ಮಕ್ಕಳು ಇದ್ದರು. ಪೊಲೀಸ್ ಬಸಪ್ಪ ರವರಿಗೆ ಎನ್ ಬಿ ಶಿವಣ್ಣ ಎಂಬ ಹೆಸರಿನ ಮಗ ಇದ್ದ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಪೊಲೀಸ್ ಬಸಪ್ಪ ರವರ ಮಗ ಹೆಸರು

ಪ್ರಭುಸ್ವಾಮಿ ಎಂದು ನುಡಿಯುತ್ತಾರೆ. ಪೊಲೀಸ್ ಬಸಪ್ಪ ರವರಿಗೆ ಪ್ರಭುಸ್ವಾಮಿ ಎಂಬ ಹೆಸರಿನ ಮಗ ಇರಲಿಲ್ಲ ಎಂದರೆ ಸರಿಯಲ್ಲ. ಪೊಲೀಸ್ ಬಸಪ್ಪ ರವರ ಹೆಂಡತಿಯ ಹೆಸರು ಪುಟ್ಟಮ್ಮ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರಿದು ಪೊಲೀಸ್ ಬಸಪ್ಪ ರವರ ಹೆಂಡತಿಯ ಹೆಸರು ರುದ್ರಮ್ಮ ಎಂದು ನುಡಿಯುತ್ತಾರೆ. ಪೊಲೀಸ್ ಬಸಪ್ಪ ರವರು ತಮ್ಮ ಸೇವಾವಧಿಯಲ್ಲಿ ಮೈಸೂರಿನ ವಿದ್ಯಾರಣ್ಯಪುರಂ ನಲ್ಲಿ ತಮ್ಮ ಹೆಂಡತಿ ಪುಟ್ಟಮ್ಮ ಹಾಗೂ ಮಗ ಎನ್ ಬಿ ಶಿವಣ್ಣ ರವರ ಜೊತೆ ವಾಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಈಗ ಸುಮಾರು 40 ವರ್ಷಗಳ ಹಿಂದೆ ಪೊಲೀಸ್ ಬಸಪ್ಪ ರವರು ಮೃತಪಟ್ಟಿರುತ್ತಾರೆ. ಪೊಲೀಸ್ ಬಸಪ್ಪ ರವರ ಒಬ್ಬರೆ ಹೆಂಡತಿ ಪುಟ್ಟಮ್ಮ ಎಂದರೆ ಸಾಕ್ಷಿಯು ಒಬ್ಬರೆ ಹೆಂಡತಿ ಎಂಬುದು ನಿಜ ಆದರೆ ಅದು ಪುಟ್ಟಮ್ಮ ಅಲ್ಲ ಅದು ರುದ್ರಮ್ಮ ಎಂದು ನುಡಿಯುತ್ತಾರೆ. ರುದ್ರಮ್ಮ ಮತ್ತು ಪೊಲೀಸ್ ಬಸಪ್ಪರವರಿಗೆ ಯಾವಾಗ ಮದುವೆಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ರುದ್ರಮ್ಮ ರವರನ್ನು ಪೊಲೀಸ್ ಬಸಪ್ಪ ರವರು ಎಂದಿಗೂ ಸಹಾ ಮದುವೆಯಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿಯು ಮುಂದುವರಿದು ರುದ್ರಮ್ಮ ರವರೇ ಪೊಲೀಸ್ ಬಸಪ್ಪ ರವರ ಹೆಂಡತಿ ಎಂದು ನುಡಿಯುತ್ತಾರೆ. ಪೊಲೀಸ್ ಬಸಪ್ಪರವರಿಗೂ ರುದ್ರಮ್ಮ ರವರಿಗೂ ಎಂದಿಗೂ ಸಹಾ ಗಂಡ ಹೆಂಡತಿ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ವಾದಿಯು ಪೊಲೀಸ್ ಬಸಪ್ಪ ನ ಮಗ ಅಲ್ಲ ಎಂದರೆ ಸರಿಯಲ್ಲ. ಎನ್ ಬಿ ಶಿವಣ್ಣ ರವರೆ ಪೊಲೀಸ್ ಬಸಪ್ಪ ರವರ ಆಸ್ತಿಗಳನ್ನು ವ್ಯವಹರಿಸುತ್ತಿದ್ದರು ಎಂದರೆ ಸರಿಯಲ್ಲ. ಎನ್ ಬಿ ಶಿವಣ್ಣ ರವರನ್ನು ಹೊರತುಪಡಿಸಿದರೆ ಪೊಲೀಸ್ ಬಸಪ್ಪ ರವರಿಗೆ ಇನ್ನಾವುದೇ ಮಕ್ಕಳು ಇರಲಿಲ್ಲ ಎಂದರೆ ಸಾಕ್ಷಿಯು ಪ್ರಭುಸ್ವಾಮಿರವರೇ ಪೊಲೀಸ್ ಬಸಪ್ಪರವರ ಮಗ ಎಂದು ನುಡಿಯುತ್ತಾರೆ. ವಾದಿಯು ಆಲ್ದೂರಿನ ಯಾವುದೇ ಬೇರೆ ಬಸಪ್ಪನ ಮಗ ಆದರೆ ಪೊಲೀಸ್ ಬಸಪ್ಪ ರವರ ಮಗ ಅಲ್ಲ ಎಂದರೆ ಸರಿಯಲ್ಲ. ಆಲ್ದೂರು ಬಸಪ್ಪ ಮತ್ತು ಪೊಲೀಸ್ ಬಸಪ್ಪ ಇಬ್ಬರು ಬೇರೆ ಬೇರೆ ಎಂದರೆ ಸರಿಯಲ್ಲ. ಪೊಲೀಸ್ ಬಸಪ್ಪ ರವರಿಗೆ ಎನ್ ಬಿ ಶಿವಣ್ಣರವರೇ ವಾರಸುದಾರರು ಎಂದರೆ ಸರಿಯಲ್ಲ. ಎನ್ ಬಿ ಶಿವಣ್ಣರವರು ಪೊಲೀಸ್ ಬಸಪ್ಪರವರ ಮಗ ಎಂದು ನನಗೆ ಗೊತ್ತಿದ್ದರೂ ಸಹಾ ನಾನು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಭುಸ್ವಾಮಿಯು ಪೊಲೀಸ್ ಬಸಪ್ಪ ರವರ ಮಗ ಅಲ್ಲ ಎಂದರೆ ಸರಿಯಲ್ಲ. ಪೊಲೀಸ್ ಬಸಪ್ಪ ರವರಿಗೂ ಮತ್ತು ಪ್ರಭುಸ್ವಾಮಿಗೂ ಯಾವುದೇ ರಕ್ತ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

05.06.2024.

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.